ಅಜ್ಞಾನ, ಅಸಹಿಷ್ಣುತೆಯ ಭಾವನೆಯಿಂದ ಬಂದಿರುವಂತಹ ಭಾವನೆ. ಸ್ವಾರ್ಥಪರವಾದ ಅನುಕರಣವಾದಿಗಳಾದ ನಾಗರಿಕ ಸಮಾಜದವರಿಗಿಂತ ಸೋಲಿಗರೇ ನಿರ್ಮಿಸಿಕೊಂಡಿರುವ ಭಿನ್ನವಾದ ಸಂಸ್ಕೃತಿಯಲ್ಲಿ ಬದುಕುತ್ತಿದ್ದಾರೆ. ಇವರಿಗೆ ಜಾತಿ ಅಡ್ಡ ಬರುವುದಿಲ್ಲ. ಎಲ್ಲರೂ ಸಮಾನ ಸಾಮಾಜಿಕ ಸ್ಥಾನಮಾನ ಹೊಂದಿದ್ದಾರೆ. ಅವರು ಭಿಕ್ಷೆಗೆ ಹೋಗುತ್ತಿರಲಿಲ್ಲ. ತಮ್ಮ ಶ್ರಮದಿಂದ ಜೀವನ ಮಾಡುತ್ತಾರೆ. ಪೊಲೀಸ್ ಸ್ಟೇಷನ್ ಎಂದರೆ ಭಯ, ತಪ್ಪನ್ನು ಒಪ್ಪಿಕೊಳ್ಳುವ ಗುಣವಿದೆ. ಕಾನೂನನ್ನು ಪಾಲಿಸುತ್ತಾರೆ. ಅವರ ಊರು, ವಸತಿ ಪ್ರದೇಶ ಕೊಳಕಾಗಿರುವುದಿಲ್ಲ. ಉಳಿದವರನ್ನು ಶೋಷಣೆ ಮಾಡುವುದಿಲ್ಲ. ಕ್ರೌರ್ಯ ಇಲ್ಲ. ಹೆಂಗಸರು ಅತ್ಯಾಚಾರಕ್ಕೊಳಗಾಗುವುದಿಲ್ಲ. ಮಕ್ಕಳು ತಂದೆ ತಾಯಿಯರ ಕ್ರೌರ್ಯಕ್ಕೆ ಒಳಗಾಗುವುದಿಲ್ಲ. ಇಂತಹ ಗುಣ, ಜೀವನ ಮೌಲ್ಯಗಳಿರುವ ಆದಿವಾಸಿಗಳನ್ನು ನಾವು ಗೌರವಿಸುತ್ತಿಲ್ಲ ಎಂಬುದು ವಿಷಾದದ ಸಂಗತಿ.

ಸೋಲಿಗರ ಮುಖ್ಯ ಸಮಸ್ಯೆ ಎಂದರೆ, ಅವರ ಭೂಮಿಯ ಒಡೆತನ. ಬ್ರಿಟಿಷರು ಕ್ರಿಮಿನಲ್ ಟ್ರೈಬ್ಸ್ ಆಕ್ಟ್ ಅನ್ನು ಜಾರಿಗೆ ತಂದಾಗಿನಿಂದ ಆದಿವಾಸಿಗಳೆಲ್ಲರೂ ಅಪರಾಧಿಗಳು ಎಂಬ ಭಾವನೆ ಬೇರೂರಿದೆ. ಅವರನ್ನು ವ್ಯವಸ್ಥೆಯ ವಿರೋಧಿಗಳೆಂದು ಭಾವಿಸಲಾಗಿದೆ. ಕಾಡಿನ ಸಂಪತ್ತನ್ನು ಹಾಳು ಮಾಡುತ್ತಿದ್ದಾರೆಂದು ಅವರನ್ನು ವ್ಯವಸಾಯ ಮಾಡುತ್ತಿದ್ದ ಸ್ಥಳದಿಂದ ಒಕ್ಕಲೆಬ್ಬಿಸಿದ್ದಾರೆ. ಹಲವಾರು ಬಗೆಯ ಅರಣ್ಯ ಇಲಾಖೆಯ ಕಾನೂನುಗಳಿಂದ ಪ್ರತಿ ತಲೆಮಾರಿಗೂ ಭೂಮಿ ವಿಭಜನೆಯಾಗುತ್ತಾ ಹೋಯಿತು. ಜೊತೆಗೆ, ಅವರು ವ್ಯವಸಾಯದ ಭೂಮಿಯನ್ನು ಕಾಡಿನಲ್ಲಿ ಆಗಾಗ ಬದಲಾಯಿಸುತ್ತಿದ್ದರು. ಕಾರಣವೇನೆಂದರೆ, ಪದೇಪದೇ ಭೂಮಿಯನ್ನು ಉತ್ತು ಬಿತ್ತುತ್ತಿದ್ದರೆ ಭೂಮಿಗೆ ಯಾತನೆಯಾಗುತ್ತದೆ. ಆ ಯಾತನೆಯನ್ನು ಕಡಿಮೆ ಮಾಡಬೇಕಾಗುವುದರಿಂದ ಈ ಬದಲಾವಣೆ. ಆದ್ದರಿಂದಲೇ ಅವರು ಬಲವಾದ ಸಲಕರಣೆಗಳನ್ನು ಉಪಯೋಗಿಸಿ ಭೂಮಿಯನ್ನು ಉಳುಮೆ ಮಾಡುತ್ತಿರಲಿಲ್ಲ. ಇಂತಹ ಆದಿವಾಸಿಗಳನ್ನು ಒಕ್ಕಲೆಬ್ಬಿಸಿ ಅವರಿಗೆ ಜಮೀನು ಸಿಗದೆ ನಿರ್ಗತಿಕರನ್ನಾಗಿ ಮಾಡಲಾಗುತ್ತಿದೆ. ಬ್ರಿಟಿಷರ ಆಡಳಿತ ವ್ಯವಸ್ಥೆಯಲ್ಲಿ ಕಾಡುಗಳ ನಾಶದಿಂದಾಗಿ ನೆಮ್ಮದಿಯಾಗಿ ಬದುಕುತ್ತಿದ್ದ ಸೋಲಿಗರು ತಮ್ಮ ವಾಸಸ್ಥಾನ, ವ್ಯವಸಾಯದ ಭೂಮಿ, ತಮಗೆ ಆಶ್ರಯ ನೀಡಿದ್ದ ಕಾಡನ್ನು ಕಳೆದುಕೊಂಡು ಕೂಲಿಗಳಾಗಿದ್ದಾರೆ. ಬಡವರೂ ಭಿಕ್ಷುಕರೂ ಆಗಿಬಿಟ್ಟಿದ್ದಾರೆ. ಇದನ್ನು ಹತ್ತೊಂಬತ್ತು ಶೀರ್ಷಿಕೆಗಳಲ್ಲಿ ವಿಶ್ಲೇಷಣೆ ಮಾಡುತ್ತಾ ಹೋಗುವ ಜಯದೇವ ಅವರ ಕ್ರಮ ಅನನ್ಯವಾಗಿದೆ.

ಕಾಡುಗಳ ನಾಶವನ್ನು ಸೋಲಿಗರ ಮೇಲೆ, ಅಷ್ಟೇ ಏಕೆ ಜಗತ್ತಿನ ಎಲ್ಲಾ ಆದಿವಾಸಿಗಳ ಮೇಲೆ ಹೊರಿಸಲಾಗುತ್ತಿದೆ. ಜಯದೇವ ಅವರು ಇದನ್ನು ಸೋಲಿಗರ ಅನುಭವದಿಂದ, ಅವರನ್ನು ಪ್ರಶ್ನೆ ಕೇಳುವುದರ ಮೂಲಕ ಕಾಡಿನ ಉಪಯುಕ್ತತೆ, ಅದರ ನಾಶದ ಬಗೆಗಿನ ವಿವರಗಳನ್ನು ಕಟ್ಟಿಕೊಡುತ್ತಾರೆ. ಮಸಣಮ್ಮ, ಕುನ್ನೇಗೌಡ, ಸೆಂಟೆಣ್ಣೆ ಮಾದೇಗೌಡ, ಕಾರನ ಕೇತೇಗೌಡ, ಡಾ. ಮಾದೇಗೌಡ, ಡಾ. ರತ್ನಮ್ಮ, ಡಾ. ಜಡೇಗೌಡರ ಮಾತುಗಳಲ್ಲಿ ಕಾಡಿನ ನಾಶಕ್ಕೆ ಕಾರಣಗಳೇನು ಎಂಬುದಕ್ಕೆ ಕೊಟ್ಟಿರುವ ವಿವರಗಳು ಅಪೂರ್ವವಾದ ಒಳನೋಟಗಳಾಗಿವೆ. ಸರ್ಕಾರದ ಕಾನೂನುಗಳ ಅವೈಜ್ಞಾನಿಕ ಸ್ವರೂಪದ ಬಗ್ಗೆ ನಮಗೆ ಮನವರಿಕೆಯಾಗುತ್ತದೆ. ಕಾಡುಗಳ ನಾಶ, ಮೊದಲೇ ತಿಳಿಸಿದಂತೆ ವಸಾಹತುಗಳ ಸ್ಥಾಪನೆಯಾದಂದಿನಿಂದ ಪ್ರಾರಂಭವಾಯಿತು. ಕೊಲಂಬಸ್ ಅಮೆರಿಕಾ ಕಂಡುಹಿಡಿದ. ಆಂಗ್ಲರು ಅಲ್ಲಿ ಕಾಡನ್ನು ನಾಶಮಾಡಿದರು. ಅಮೆರಿಕ, ಏಷ್ಯಾ, ಆಸ್ಟ್ರೇಲಿಯಾ ಅನಂತರ 20ನೇ ಶತಮಾನದ ಮಧ್ಯದವರೆಗೆ ವಸಾಹತುವಾದಿಗಳು ಆಫ್ರಿಕಾ ಕಾಡುಗಳನ್ನು ನಾಶಮಾಡಿದರು. ಸಾಹಿತ್ಯ ಕೃತಿಗಳು ಈ ಕಾಡಿನ ನಾಶದ ಬಗ್ಗೆ ವಿವರಿಸಿವೆ. ಪೆಟ್ರಿಕ್ ವೈಟ್ ಎಂಬ ಆಸ್ಟ್ರೇಲಿಯನ್ ಲೇಖಕನ 'ವ್ಹಾಸ್' ಎಂಬ ಕಾದಂಬರಿ, ಜೋಸೆಫ್ ಕಾನ್ರಾಡ್‌ನ 'ದಿ